**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಳ್ಳಕೆರೆ**

**ಸಿ.ಸಿ.ನಂ.614/2020**

| **ಪಿರ್ಯಾದಿ:** | **:ವಿರುದ್ಧ:** | **ಆರೋಪಿಗಳು** |
|---|---|---|
| ಸರ್ಕಾರದ ಪರವಾಗಿ | | 1. ಶೌಕತ್ |
| ಚಳ್ಳಕೆರೆ ಪೋಲೀಸ್ | | 2. ಜಗದೀಶ |
| | | 3. ಮನ್ಸೂರ್ |

**ದೋಷಾರೋಪಣೆ**

**ಶ್ರೀಮತಿ ರೇಷ್ಮ ಕಳಕಪ್ಪ ಗೋಣಿ, ಹಿರಿಯ ಸಿವಿಲ್ ನ್ಯಾಯಾಧೀಶರುಮತ್ತು ಜೆಎಂಎಫ್‌ಸಿ, ಚಳ್ಳಕೆರೆ, ಆದ ನಾನು**

ಆರೋಪಿಗಳಾದ –

1. ಶೌಕತ್ ತಂದೆ ಬಾಷಿರ್ ಸಾಬ್,
   27 ವರ್ಷ, ಮದೀನಾಮುನಾವರ್ ಮಸೀದ್ ಎದುರುಗಡೆ,
   ಮೊದಲನೆ ಅಡ್ಡ ರಸ್ತೆ, ಚೇಳುಗುಡ್ಡ, ಚಿತ್ರದುರ್ಗ ಟೌನ್
2. ಜಗದೀಶ ತಂದೆ ಗೋವಿಂದಪ್ಪ,
   19 ವರ್ಷ, ಭೀಮಣ್ಣ ಮನೆಯ ಹಿಂಬಾಗ, ಬೋವಿ ಕಾಲೋನಿ,
   ಬಿ ಡಿ ರೋಡ್, ಚಿತ್ರದುರ್ಗ ಟೌನ್
3. ಮನ್ಸೂರ್ ತಂದೆ ರಿಜ್ವಾನ್ ಸಾಬ್,
   35 ವರ್ಷ, ಚೇಳುಗುಡ್ಡ, ಚಿತ್ರದುರ್ಗ ಟೌನ್

**ಆದ ನಿಮ್ಮ ವಿರುದ್ದ ಈ ಕೆಳಕಂಡ ಆರೋಪಣೆಗೆ ಗುರಿಪಡಿಸುತ್ತೇನೆ.**

ದಿನಾಂಕ: 05.05.2016 ರಿಂದ ದಿನಾಂಕ 07.05.2016 ರ ವರೆಗೆ ರಾತ್ರಿ ವೇಳೆಯಲ್ಲಿ ಚಳ್ಳಕೆರೆ ತಾಲ್ಲೂಕು, ಚಳ್ಳಕೆರೆ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಚಳ್ಳಕೆರೆ ಟೌನ್ ತ್ಯಾಗರಾಜ ನಗರದ ಬಾಪೂಜಿ ಕಾಲೇಜ್ ಸಮೀಪ ಐಶ್ವರ್ಯ ಡಾಬಾ ಹೋಟೆಲ್ ಹತ್ತಿರ ಇರುವ ಚಾಸಾ 1 ಹಬೀಬ್‌ವುಲ್ಲಾ ತಂದೆ ರಿಜ್ವಾನ್‌ವುಲ್ಲಾ ರವರ ಮನೆಯಲ್ಲಿ 1 ರಿಂದ 3 ನೇ ಆರೋಪಿಗಳಾದ ನೀವು ಮನೆ ಕಳ್ಳತನ ಮಾಡುವ ಉದ್ದೇಶದಿಂದ 2 ನೇ ಆರೋಪಿಯಾದ ಜಗದೀಶ್ ಅಲಿಯಾಸ್ ಜಗ್ಗ ಅಲಿಯಾಸ್ ಶೆಲುಷನ್ ಈತನನ್ನು ಮನೆಯ ಹತ್ತಿರ ಸ್ವಲ್ಪ ದೂರದಲ್ಲಿ ಕಾವಲಿರಿಸಿ ಯಾರಾದರು ಬಂದರೆ ಸೂಚನೆ ನೀಡುವಂತೆ ತಿಳಿಸಿ 1 ನೇ ಆರೋಪಿಯಾದ ಶೌಕತ್ ಅಲಿ ಮತ್ತು 3 ನೇ ಆರೋಪಿ ಮನ್ಸೂರ್ ನೀವು ಮನೆಯ ಹಿಂಬಾಗಿಲಿಗೆ ಹಾಕಿದ್ದ ಬಾಗಿಲ ಬೀಗವನ್ನು ಮುರಿದು ಒಳಗೆ ಅಕ್ರಮವಾಗಿ ಒಳಗೆ ಪ್ರಮೇಶ ಮಾಡಿ ಭಾ.ದಂ.ಸಂ. ಕಲಂ.457 ಸಹವಾಚದ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀಯ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಮನೆಯ ಹಿಂಬಾಗಿಲಿಗೆ ಹಾಕಿದ್ದ ಬಾಗಿಲ ಬೀಗವನ್ನು ಮುರಿದು ಮನೆಯ ಬೆಡ್ ರೂಂನಲ್ಲಿದ್ದ ಗಾಡ್ರೇಜ್ ಬೀರುವನ್ನು ತೆಗೆದು ಬೀರುವಿನಲ್ಲಿ ಇಟ್ಟಿದ್ದ ಒಟ್ಟು 2,60,000/– ರೂಪಾಯಿ ಬೆಲೆ ಬಾಳುವ ಬೆಳ್ಳಿ ಬಂಗಾರದ ಒಡವೆಗಳಾದ 1) ಒಂದು ಜೊತೆ ಬಂಗಾರದ ಹ್ಯಾಂಗಿಗ್ಸ್ 10 ಗ್ರಾಂ ತೂಕ, 2) ಒಂದು ಜೊತೆ ಬಂಗಾರದ ಕಿವಿಯ ಗುಂಡುಗಳು 10 ಗ್ರಾಂ ತೂಕ, 3) ಒಂದು ಜೊತೆ ಬಂಗಾರದ ಜುಂಕಿ ಸೆಟ್ 10 ಗ್ರಾಂ ತೂಕ, 4) ಒಂದು ಜೊತೆ ಬಂಗಾರದ ಹ್ಯಾಂಗಿಗ್ಸ್ 10 ಗ್ರಾಂ ತೂಕ, 5) ಒಂದು ಗುಬ್ಬಿಸ್ ಡಿಸೈನ್ ಇರುವ ಬಂಗಾರದ ನೆಕ್ಲೆಸ್ 30 ಗ್ರಾಂ ತೂಕ, 6) ಒಂದು ಎರಡು ಎಳೆಯ ಸಾದಾ ಬಂಗಾರದ ಮಾಂಗಲ್ಯ ಸರ 20 ಗ್ರಾಂ ತೂಕ, 7) ನಾಲ್ಕು ಬಂಗಾರದ ಸಾದಾ ಬಂಗಾರದ ಉಂಗುರಗಳು 40 ಗ್ರಾಂ ತೂಕ, 8) ಒಂದು ಬೆಳ್ಳಿಯ ಲೋಟ 40 ಗ್ರಾಂ ತೂಕ, 9) ಒಂದು ಜೊತೆ ಕಿವಿಯ ಬೆಳ್ಳಿ ಕಡ್ಡಿಗಳು 20 ಗ್ರಾಂ ತೂಕ, 10) ಒಂದು ಬೆಳ್ಳಿಯ ಉಂಗುರ 40 ಗ್ರಾಂ ತೂಕ ಬೆಳ್ಳಿ ಬಂಗಾರದ ಒಡವೆಗಳನ್ನು ಕಳ್ಳತನ ಮಾಡಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ. ಕಲಂ 380 ಸಹವಾಚಕ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರ ಎಂದು ಆರೋಪಿಸಲಾಗಿದೆ.

(ಮೇಲ್ಕಂಡ ಆರೋಪಣೆಗಳನ್ನು ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದರಿಂದ ವಿಚಾರಣೆಗೆ ಗುರಿಯಾಗಬೇಕು ಎಂದು ನಿರ್ದೇಶಿಸಿರುತ್ತೇನೆ.)

**(ರೇಷ್ಮ ಕಳಕಪ್ಪ ಗೋಣಿ)**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**

**ಚಳ್ಳಕೆರೆ.**

**ದಿನಾಂಕಃ 10.01.2022.**

**ಸ್ಥಳಃ ಚಳ್ಳಕೆರೆ**